## ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ ನಂ. 424/2023

| | | |
|---|---|---|
| ಹೆಸರು | ಚಿನ್ಮಯಿ ತೊರಗಲ್ಲ | PW -01 |
| ತಂದೆಯ ಹೆಸರು | ಬಾಬುರಾವ್ ತೊರಗಲ್ಲ | CW -01 |
| ವಯಸ್ಸು | 36 ವರ್ಷ | |
| ಉದ್ಯೋಗ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ಮಿಟ್ಲಕಟ್ಟೆ ಗ್ರಾಮ | ದಿನಾಂಕಃ 30-01-2025 |
| ವಾಸ | ಹುಬ್ಬಳಿ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ನಾನು 04-03-2019 ರಿಂದ 22-02-2024 ರವರೆಗೆ ಕಾರ್ಖಾನೆಗಳ ಸಹಾಯ ನಿರ್ದೇಶಕರು, ದಾವಣಗೆರೆ ಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 08.02.2023 ರಂದು ಎಲೆಕ್ಟ್ರಾನಿಕ್ ಮಿಡಿಯಾದಲ್ಲಿ ಮಿಟ್ಲಕಟ್ಟೆ ಗ್ರಾಮದ ಆಕಾಶ್ ರೈಸ್ ಇಂಡಸ್ಟ್ರೀಸ್ ನಲ್ಲಿ ಒಬ್ಬ ವ್ಯಕ್ತಿ ವಿದ್ಯೂಚ್ಚಕ್ತಿ ತಗುಲಿ ಸಾವು ಸಂಭವಿಸಿದೆ ಎಂದು ಟಿವಿ ಮಾಧ್ಯಮದಲ್ಲಿ ಬರುತ್ತಿದ್ದನ್ನು ನೋಡಿ, ಮರನೆ ದಿನ ದಿನಾಂಕ 09.02.2023 ರಂದು ಸಂಜೆ 4.00 ಗಂಟೆ ಸುಮಾರಿಗೆ ಕಾರ್ಖಾನೆ ಪರಿವಿಕ್ಷಣೆಯನ್ನು ಕೈಗೊಂಡಿರುತ್ತೇನೆ. ಆ ಕಾಲಕ್ಕೆ ಚಾಸಾ 3 ರವರು ನನ್ನ ಜೊತೆ ಹಾಜರಿದ್ದು, ಅಪಘಾತ ಸಂಭವಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ನನಗೆ ತೋರಿಸಿ, ಸಂದೀಪ್ ಎನ್ನುವ ವ್ಯಕ್ತಿಯು ಮಧ್ಯಾಹ್ನ 2.15 ರ ವೇಳೆಗೆ ಬೊರವೆಲ್ ಬಟನ್ ನ್ನು ಸ್ವಿಚ್ ಆನ್ ಮಾಡಲು , ಕಾರಖಾನೆಯ ಹಿಂಭಾಗದಲ್ಲಿರುವ ಕಿಟಕಿಯ ಮುಲಕ ಕೈ ಹಾಕಿದಾಗ, ಒಂದು ವೈರ್ ಕಿಟಕಿಯ ಕಬ್ಬಿಣದ ಸಳಿಗೆ ತಗುಲಿ, ವಿದ್ಯೂತ್ ಹರಿಯುತ್ತಿದು, ಸದರಿ ಕಬ್ಬಿಣ ಸಳಿಗೆ ಸಂದೀಪ್ ನ ಕೈ ತಗುಲಿದ್ದು, ಆಗ ಸದರಿ ವಿದ್ಯೂತ್ ಸಂಪರ್ಕದಿಂದ ಸಂದೀಪನಿಗೆ ವಿದ್ಯೂತ್ ತಗುಲಿ ಸಾವನ್ನಪ್ಪಿರುತ್ತಾರೆ ಎಂದು ಮಾಹಿತಿಯನ್ನು ನೀಡಿರುತ್ತಾರೆ. ನಂತರ ಚಾಸಾ.3 ರವರು ಸದರಿ ಅವಘಡವನ್ನು ನೋಡಿದ ಒಬ್ಬ ಪ್ರತ್ಯಕ್ಷ ಸಾಕ್ಷಿ ಇದ್ದು, ಅವರು ನಾವು ಹೋದ ಸಮಯದಲ್ಲಿ ಇರಲಿಲ್ಲ. ನಂತರ ಅದೇ ಸಮಯದಲ್ಲಿ ಚಾಸಾ.3 ರವರಿಗೆ ಸ್ಥಳ ಪರಿಶೀಲನಾ ವರದಿಯನ್ನು ನೀಡಿರುತ್ತೇನೆ.

ದಿಃ 01.03.2023 ರಂದು ಪುನಃ ಕಾರ್ಖಾನೆಗೆ ಬೇಟಿ ನೀಡಿ, ಚಾಸಾ.2 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಕಾರ್ಖಾನೆ ಆಡಳಿತ ವರ್ಗದವರು ಪಾರಂ 17 ನ್ನು ನಮ್ಮ ಕಛೇರಿಗೆ ಸಲ್ಲಿಸಿರುತ್ತಾರೆ. ನಂತರ ಪೋಲಿಸರಿಂದ ಮೃತ ಸಂದೀಪ್ ನ ಪಿ ಎಂ ವರದಿಯನ್ನು ಮತ್ತು ಪ್ರ.ವ. ವರದಿಯನ್ನು ಪಡೆದಿರುತ್ತೇನೆ. ನಂತರ ಸ್ಥಳ ಪರಿಶೀಲನೆ ಮತ್ತು ಕಾರ್ಖಾನೆಯರು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಸದರಿ ಅವಘಡವು ಯಾವ ರೀತಿ ಆಯಿತು ಮತ್ತು ಹೇಗೆ ಆಯಿತು ಮತ್ತು ಇದರಲ್ಲಿ ಕಾರ್ಖಾನೆಯ ಯಾವುದಾದರು ನಿಯಮಗಳ ಉಲ್ಲಂಘನೆ ಆಗಿದೆಯಾ ಎಂದು ಪರಿಶೀಲನೆ ಮಾಡಿದಾಗ, ಕಾರ್ಖಾನೆಯು ನಿಯಮಗಳು ಉಲ್ಲಂಘನೆ ಮಾಡಿದ ಬಗ್ಗೆ ತಿಳಿದು ಬಂದಿದ್ದು, ದಿಃ 31.03.2023 ರಂದು ಕಾರ್ಖಾನೆಯ ಅನುಭೋಗದಾರರು ಮತ್ತು ವ್ಯವಸ್ಥಾಪಕರು ಆದ ಸುರೇಶ್ ರವರಿಗೆ ಉಲ್ಲಂಘನೆಗೆ ಸಂಬಂಧಿಸಿದಂತೆ ನೋಟಿಸ್ ನ್ನು ಜಾರಿ ಮಾಡಿರುತ್ತೇನೆ.

ದಿನಾಂಕ 24.04.2023 ರಂದು ಸದರಿ ನೋಟಿಸ್ ಗೆ ಸುರೇಶ್ ರವರು ಉತ್ತರ ನೀಡಿರುತ್ತಾರೆ. ಸದರಿ ಅವಘಡದಿಂದ ಮೃತ ಪಟ್ಟ ಸಂದೀಪನ ಕುಟುಂಬಕ್ಕೆ ನಾವು ಪರಿಹಾರ ನೀಡಿರುತ್ತೇವೆ ಎಂದು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ನಂತರ ಆರೋಪಿಯು ನೀಡಿದ ಉತ್ತರವು ಅವರು ಮಾಡಿದ ಉಲ್ಲಂಘನೆ ಮತ್ತು ನೀಡಿರುವ ಪರಿಹಾರಕ್ಕೆ ಸಮಂಜಸ ಇರಲಿಲ್ಲ ಎಂದು ಅಭಿಪ್ರಾಯ ಪಟ್ಟು ಆದೇಶ ಮಾಡಿರುತ್ತೇವೆ.

ದಿಃ 27.04.2023 ರಂದು ಮಾನ್ಯ ನ್ಯಾಯಾಲಯದ ಮುಂದೆ ಆರೋಪಿತನು ಮಾಡಿರುವ ಕೃತ್ಯವು ಕಾರ್ಖಾನೆ ಕಾಯ್ದೆ ಅಡಿಯಲ್ಲಿ ಉಲ್ಲಂಘನೆ ಎಂದು ಆರೋಪಿಸಿ, ಆರೋಪಿ ವಿರುದ್ಧ ದೂರು ನೀಡಿರುತ್ತೇವೆ.

ಚಾಸಾ.2 ರವರ ಹೇಳಿಕೆಯ ಪ್ರಕಾರ ಸಂದಿಪ್ ಎನ್ನುವವರು ಸದರಿ ಕಾರ್ಖಾನೆಯಲ್ಲಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದು, ದಿಃ 07.02.2023 ರಂದು ಬೆಳಗ್ಗೆ 10.00 ಗಂಟೆಗೆ ಕಾರ್ಖಾನೆಗೆ ಕೆಲಸಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಮಧ್ಯಾಹ್ನ 2.15 ಗಂಟೆ ಸಮಯದಲ್ಲಿ ಕಾರ್ಖಾನೆಯ ಹಿಂಭಾಗ ಡ್ರೈಯರ್ ವಿಭಾಗದ ಹಿಂದೆ ಹೋದಾಗ, ಬೋರ್ ವೆಲ್ ನಿಂದ ನೀರನ್ನು ತೆಗೆಯಲು ಕಿಟಕಿಯ ಮೂಲಕ ಬೂರವೆಲ್ ನ ಸ್ವಿಚ್ ಆನ್ ಮಾಡಲು ಹೋದಾಗ, ಏಕಾಏಕಿ ಜೋರಾಗಿ ಕಿರುಚಿದ್ದು, ಆಗ ಚಾಸಾ.2 ರವರು ವೆ ಬ್ರಿಡ್ಜ ಹತ್ತಿರ ಊಟ ಮಾಡುತ್ತಿದ್ದರು, ಕೂಡಲೆ ಏನಾಯಿತು ಎಂದು ನೋಡಲು ಹೋದಾಗ, ಡ್ರೆಯರ್ ವಿಭಾಗದ ಕೆಲಸಗಾರರಾದ ಮಧುಕುಮಾರ ಮತ್ತು ರಾಜು ರವರು ಮುರ್ಚೆಹೋದ ಸ್ಥಿತಿಯಲ್ಲಿ ಸಂದಿಪ್ ರವರನ್ನು ಎತ್ತಿಕೊಂಡು ಬರುತ್ತಿದ್ದರು. ನಂತರ ಅವರನ್ನು ದಾವಣಗೆರೆ ಚೀಗಟೇರೆ ಆಸ್ಪತ್ರೆಗೆ ದಾಖಲಿಸಲು ತೆಗೆದುಕೊಂಡು ಹೋದಾಗ, ಅವರಿಗೆ ಅಲ್ಲಿನ ವೈದ್ಯರು ಮೃತ ಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿದ್ದ ಆರೋಪಿಯನ್ನು ನೋಡಿದರೆ ಗುರುತಿಸುತ್ತಾರೆ.

ಸದರಿ ಸ್ಥಳ ಪರಿಶೀಲನಾ ವರದಿಯನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು, ಚಾಸಾ.2 ಹೇಳಿಕೆಯನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು, ಫಾರಂ ನಂ. 17 ನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು, ಕಾರಣ ಕೇಳಿ ನೋಟಸ್ ನ್ನು ನಿಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು, ಅಂಚೆ ಸ್ವೀಕೃತಿ ನಿಪಿ.5 ಎಂದು, ಆರೋಪಿ ನೀಡಿದ ಉತ್ತರವನ್ನು ನಿಪಿ.6 ಎಂದು, ಕಚೇರಿ ಆದೇಶವನ್ನು ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಸ್ಥಳ ಪರಿಶೀಲನೆಗೆ ಸಮಯದಲ್ಲಿ ತೆಗೆದ 3 ಪೋಟೊಗಳನ್ನು ಕ್ರಮವಾಗಿ ನಿಪಿ. 8 ರಿಂದ 10 ಎಂದು, ಅದಕ್ಕೆ ಸಂಬಂಧಿಸಿದ ಸಿಡಿಯನ್ನು ನಿಪಿ.11 ಎಂದು ಗುರುತಿಸಲಾಯಿತು. ಪ್ರಮಾಣ ಪತ್ರವನ್ನು ನಿಪಿ.12 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ನಿಪಿ.13 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ಪೋಲಿಸರಿಂದ ಪಡೆದುಕೊಂಡ ದೂರು, ಪ್ರ.ವ. ವರದಿಯನ್ನು ಮತ್ತು ದಿಃ 11.02.2023 ರಂದು ಜರುಗಿಸಿದ ಕೃತ್ಯ ಸ್ಥಳ ಮತ್ತು ಅಮಾನತ್ತು ಪಂಚನಾಮೆ, ಮೃತ ಸಂದೀಪನ ಪಿ ಎಂ ವರದಿಗಳ ದೃಢಿಕೃತ ನಕಲು ಪ್ರತಿಗಳನ್ನು ನಿಪಿ.14 ಎಂದು ಗುರುತಿಸಲಾಯಿತು.

**(ಪಾಟೀ ಸವಾಲಿಗಾಗಿ ಆರೋಪಿತರ ಪರ ವಕೀಲರು ಕಾಲವಕಾಶ ಕೋರಿದ್ದು, ಮಂಜೂರು ಮಾಡಲಾಯಿತು.)**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.